

# ಅಮೃತಮತಿ ಮರುಕಥನ

ಜನ್ನನ 'ಯಶೋಧರ ಚರಿತೆ'ಗೆ ಕನ್ನಡ ಸಾಹಿತ್ಯಲೋಕದಲ್ಲಿ ಇರುವ ಸ್ಥಾನ ಅನನ್ಯವಾದದ್ದು. ಈ ಕಾವ್ಯದ ನಾಯಕಿ 'ಅಮೃತಮತಿ' ನಂತರವೂ ಹಲವು ಕವಿಗಳನ್ನು ಕಾಡಿದ್ದಾಳೆ. ತನ್ನ ಕಥನವನ್ನು ಹಲವು ಬಗೆಗಳಲ್ಲಿ ಮರುಕಥಿಸಿಕೊಂಡಿದ್ದಾಳೆ. ಇದೀಗ 'ಅಮೃತಮತಿ' ತೆರೆಯಲ್ಲಿ ಜನ್ಮತಳೆವ ಸಿದ್ಧತೆಯಲ್ಲಿದ್ದಾಳೆ.

ಸಾಹಿತ್ಯ ಮತ್ತು ಸಿನಿಮಾ ಎರಡೂ ಕ್ಷೇತ್ರಗಳಲ್ಲಿ ಗಮನಾರ್ಹ ಕೃಷಿ ಮಾಡಿರುವ ಬರಗೂರು 'ಅಮೃತಮತಿ'ಯನ್ನು ತೆರೆಗೆ ತರುತ್ತಿದ್ದಾರೆ. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ನಿರ್ದೇಶಕರೇ ಹೇಳಿಕೊಂಡಿರುವಂತೆ ಜನ್ನನ 'ಯಶೋಧರ ಚರಿತೆ'ಯನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸುವಾಗ ಕೆಲವು ಬದಲಾವಣೆಯನ್ನೂ ಮಾಡಿಕೊಂಡಿದ್ದಾರೆ. ಅಮೃತಮತಿಯ ಸಂಕಟವನ್ನು ಪುನರ್ ವ್ಯಾಖ್ಯಾನಿಸುವ ಪ್ರಯತ್ನ ಮಾಡಿದ್ದಾರೆ.

ನಟಿ ಹರಿಪ್ರಿಯಾ ಈ ಚಿತ್ರದಲ್ಲಿ ಅಮೃತಮತಿಯಾಗಿ ನಟಿಸಿದ್ದಾರೆ. ಯಶೋಧರನ ಪಾತ್ರದಲ್ಲಿ ಕಿಶೋರ್ ನಟಿಸಿದ್ದಾರೆ. ಅಷ್ಟಾವಂಕನಾಗಿ ತಿಲಕ್ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ, ಸುಂದರ್ ರಾಜ್, ಪ್ರಮೀಳಾ ಜೋಷಾಯ್, ಸುಪ್ರಿಯಾ ರಾವ್, ವತ್ಸಲಾ ಮೋಹನ್ ಇದ್ದಾನೆ. ಸುರೇಶ್ ಅರಸ್ ಸಂಕಲನ, ಶಮಿತಾ ಮಲ್ನಾಡ್ ಸಂಗೀತ ಈ ಚಿತ್ರಕ್ಕಿದೆ. ನಾಗರಾಜ ಆದವಾನಿ ಛಾಯಾಗ್ರಹಣ ಮಾಡಿದ್ದಾರೆ. ■



# ಕಿರುತೆರೆಗೆ ಡಿ ಬಾಸ್ ಎಂಟ್ರಿ ಇಲ್ಲ

ಸುದೀಪ್, ಪುನೀತ್, ಗಣೇಶ್, ರಮೇಶ್, ಜಗ್ಗೇಶ್, ಯೋಗಿ ಹೀಗೆ ಕಿರುತೆರೆಯ ಭಾಗವಾಗಿರುವ ಕನ್ನಡದ ಸ್ಟಾರ್ ನಟರ ಪಟ್ಟಿ ದೊಡ್ಡದಿದೆ. ಅಲ್ಲಿ ಸಿಗುವ ದೊಡ್ಡ ಮೊತ್ತದ ಸಂಭಾವನೆ ಮತ್ತು ವೀಕ್ಷಕರಿಗೆ ಆಪ್ತರಾಗಿ ತಮ್ಮ ಅಭಿಮಾನಿ ಬಳಗವನ್ನು ಬೆಳೆಸಿಕೊಳ್ಳುವ ತಂತ್ರ ಎರಡು ಕಾರಣಗಳೂ, ಸ್ಟಾರ್ ನಟರ ಟೀವಿ ಪರೇಡ್ ಹಿಂದಿದೆ.

ಹೀಗೆ ಘಟಾನುಘಟಿಗಳೆಲ್ಲ ಕಿರುತೆರೆಯಲ್ಲಿ ಮಿಂಚುತ್ತಿದ್ದರೂ ದರ್ಶನ್ ಮಾತ್ರ ಮಾಯಾಪೆಟ್ಟಿಗೆಯ ಸಹವಾಸಕ್ಕೆ ಹೋಗದೆ ದೂರವೇ ಉಳಿದಿದ್ದರು. ಹಾಗಂತ ಅವರಿಗೆ ಈ ಆಫರ್‌ಗಳು ಬಂದಿಲ್ಲ ಎಂದೇನಿಲ್ಲ. ಸಾಕಷ್ಟು ಅವಕಾಶಗಳು ಬಂದಿದ್ದರೂ ಅವರೇ ಯಾಕೋ ಉತ್ಸಾಹ ತೋರಿರಲಿಲ್ಲ.

ಆದರೆ ಕೆಲವು ದಿನಗಳ ಹಿಂದೆ 'ಡಿ ಬಾಸ್ ಕಿರುತೆರೆಗೆ ಎಂಟ್ರಿ ಕೊಡಲು ಮನಸ್ಸು ಮಾಡಿದ್ದಾರೆ. ಕನ್ನಡದ ವಾಹಿನಿಯೊಂದು ಚಾಲೆಂಜಿಂಗ್ ಸ್ಟಾರ್ ಅವರನ್ನು ಕಿರುತೆರೆಯ ಶೋ ಒಂದನ್ನು ನಡೆಸಿಕೊಡುವಂತೆ ಮನವೊಲಿಸಿದೆ' ಎಂಬ ಸುದ್ದಿಗಳು ಹರಿದಾಡುತ್ತಿದ್ದವು. ಆದರೆ ಯಾವ ಕಾರ್ಯಕ್ರಮ, ಯಾವ ಚಾನೆಲ್ ಎಂಬ ಕುರಿತು ಯಾವುದೇ ಸ್ಪಷ್ಟನೆ ಸಿಕ್ಕಿರಲಿಲ್ಲ. ದರ್ಶನ್ ಕೂಡ ಈ ಕುರಿತು ಸ್ಪಷ್ಟನೆ ನೀಡಿರಲಿಲ್ಲ.

ಕೊನೆಗೂ ಈ ಊಹಾಪೋಹಗಳಿಗೆ ಸ್ವತಃ ದರ್ಶನ್ ತೆರೆ ಎಳೆದಿದ್ದಾರೆ. ಇತ್ತೀಚೆಗೆ ಸಂದರ್ಶನವೊಂದರಲ್ಲಿ ಈ ಕುರಿತು ಮಾತನಾಡಿರುವ ದರ್ಶನ್, 'ನನಗೆ ಎರಡು ಕಡೆಗಳಲ್ಲಿ ನಟಿಸಲು ಬರುವುದಿಲ್ಲ. ಹಿರಿತೆರೆಯಲ್ಲಿ ಬ್ಯುಸಿ ಇದ್ದೇನೆ. ಕಿರುತೆರೆ ಕುರಿತು ಯೋಚಿಸಿಯೂ ಇಲ್ಲ' ಎಂದು ನಕ್ಕಿದ್ದಾರೆ.

ಅಲ್ಲಿಗೆ ಕಿರುತೆರೆಯಲ್ಲಿಯೂ ಡಿ ಬಾಸ್ ಮಾಸ್ ಡೈಲಾಗ್ ಕೇಳಲು ಸಜ್ಜಾಗಿದ್ದ ಅವರ ಅಭಿಮಾನಿಗಳ ಉತ್ಸಾಹಕ್ಕೆ ತಣ್ಣೀರೆರೆಚಿದಂತಾಗಿದೆ. ಹಾಗಂತ ಅವರು ಪೂರ್ತಿ ನಿರಾಶರೇನೂ ಆಗಿಲ್ಲ. ಇಂದಲ್ಲಾ ನಾಳೆ ದರ್ಶನ್, ಟೀವಿಗೆ ಬಂದೇ ಬರ್ತಾರೆ. ತಮ್ಮ ಖದರ್ ತೋರಿಸಿಯೇ ತೋರಿಸ್ತಾರೆ ಎಂಬ ನಂಬಿಕೆಯಲ್ಲಿಯೇ ಅವರಿದ್ದಾರೆ. ಆದರೆ ಅವರ ಕನಸು ನನಸಾಗುವ ಕಾಲ ಯಾವಾಗ ಬರುವುದೋ ಕಾದು ನೋಡಬೇಕಷ್ಟೆ ■